ESI.A.No.10-2022

AW-1,

ದಿನಾಂಕಃ 14-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ- ಎದುರುದಾರರ ಪರವಾಗಿಃ ಶ್ರೀ. ಎಸ್ ಡಬ್ಲ್ಯೂಕೆ ವಕೀಲರಿಂದ ಃ

ಸುವರ್ಣ ಭವನ್ ರೆಸ್ಟೋರೆಂಟ್ ಆಗಿರುತ್ತದೆ. ಸದರಿ ಸಂಸ್ಥೆ ಯು 2013 ರಲ್ಲಿ ಅಸ್ತಿತ್ವಕ್ಕೆ ಬಂದು 9 ವರ್ಷ ಗಳ ಕಾಲ ನಡೆಸಿರುತ್ತೇವೆ. ಸದರಿ ಸಂಸ್ಥೆಗೆ ನಾನೇ ಎದುರುದಾರರಿಂದ ಇ ಎಸ್ ಐ ಕೋಡ್ ನ್ನು ಪಡೆದಿಕೊಂಡಿರುತ್ತೇನೆ ಎಂದರೆ ಸರಿ . ಆ ಕಾಲಕ್ಕೆ ನಮ್ಮ ಸಂಸ್ಥೆಯಲ್ಲಿ 16 ಜನ ಕೆಲಸಗಾರರು ಇದ್ದಾರೆ ಎಂದು ತೋರಿಸಿರುತ್ತೇನೆ ಎಂದರೆ ಸರಿ . ದಿಃ 01.01.2019 ರಿಂದ 31.03.2019 ರವರೆಗೆ ಮತ್ತು 01.12.2019 ರಿಂದ 31.10.2020 ರವರೆಗೆ ನಾನು ವಂತಿಗೆಯನ್ನು ಕಟ್ಟಿರುವುದಿಲ್ಲ ಎಂದು ದಿನಂಾಕ 16.12.2020 ರಂದು ನನಗೆ ಷೋಕಾಸ್ ನೋಟೀಸ್ ಬಂದಿರುತ್ತದೆ ಎಂದರೆ ಸರಿ . ಸದರಿ ನೋಟೀಸ್ ನಲ್ಲಿ 1,05,336/- ವಂತಿಗೆಯನ್ನು ಕಟ್ಟಬೇಕು ಎಂದು ತಿಳಿಸಲಾಗಿತ್ತು ಎಂದರೆ ಸರಿ . ಸದರಿ ನೋಟೀಸನಲ್ಲಿ ಖುದ್ದು ಸುನಾವಣೆಗೆ ದಿನಾಂಕ 27.01.2021 ರಂದು ಹಾಜರಾಲು ತಿಳಿಸಲಾಗಿತ್ತು ಎಂದರೆ ಸರಿ . ಸದರಿ ನೊಟೀಸ್ ನಲ್ಲಿ ಸಂಸ್ಥೆ ಯ Wage Register, Attendance Register, Book of Account, Balance sheet and Profit and Loss Account ನ್ನು ಹಾಜರುಪಡಿಸುವಂತೆ ತಿಳಿಸಲಾಗಿತ್ತು ಎಂದರೆ ಸರಿ . ದಿನಾಂಕ 27.01.2021 ರಂದು ನಮ್ಮ ಸಂಸ್ಥೆ ಯ ಪರವಾಗಿ ಎದುರುದಾರರ ಮುಂದೆ ಖುದ್ದು ಸುನಾವಣೆಗೆ ಯಾರೂ ಹಾಜರಾಗಿರುವುದಿಲ್ಲ ಎಂದರೆ ಸರಿ . ಸದರಿ ದಿನ ಯಾರು ಹಾಜರಾಗದೇ ಇದ್ದುದರಿಂದ ದಿನಾಂಕ 12.02.2021 ರಂದು ಖುದ್ದು ಸುನಾವಣೆ ಗೆ ಹಾಜರಾಗುವಂತೆ ಎದುರುದಾರರು ಮತ್ತೊಂದು ನೋಟೀಸ್‌ನ್ನು ನೀಡಿರುತ್ತಾರೆ ಎಂದರೆ ಸರಿ. ಸದರಿ ಸುನಾವಣೆಗೂ ಕೂಡ ನಮ್ಮ ಸಂಸ್ಥೆಯ ಪರವಾಗಿ ಯಾರೂ ಹಾಜರಾಗಿರುವುದಿಲ್ಲ ಎಂದರೆ ಸರಿ . ಸದರಿ ಎರಡೂ ಸುನಾವಣೆಗೆಳಿಗೆ ಹಾಜರಾಗದೇ ಇದ್ದುದರಿಂದ ಎದುರುದಾರರು ದಿನಂಾಕ 20.04.2021 ರಂದು ರೂ. 1,05,336/- ಕಟ್ಟಬೇಕು ಎಂದು ಆದೇಶ ಹೊರಡಿಸಿರುತ್ತಾರೆ ಎಂದರೆ ಸರಿ .

ನಂತರ ದಿಃ 02.08.2021 ರಂದು ರೂ. 1,22,034/- ಗಳಿಗೆ ಎದುರುದಾರರು ರಿಕವರಿ ನೋಟೀಸ್ ಅನ್ನು ಹೊರಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮೊತ್ತದಲ್ಲಿ ನಾನು ಕಟ್ಟಬೇಕಾದ ವಂತಿಗೆ , ಬಡ್ಡಿ ಮತ್ತು ರಿಕವರಿ ಕಾಸ್ಟ್ ಸೇರಿಕೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮೊತ್ತವನ್ನು ಕಟ್ಟಿಲ್ಲವೆಂದು 1,24,093/- ರೂಪಾಯಿಗಳಿಗೆ ಬ್ಯಾಂಕ್ ಗೆ ಗಾರ್ನಿಶಿ ಆರ್ಡರ್ ಅನ್ನು ನೀಡಲಾಗಿರುತ್ತದೆ ಎಂದರೆ ಸರಿ . ನನ್ನ ಪ್ರಮಾಣ ಪತ್ರದ 2 ನೇ ಪ್ಯಾರಾದಲ್ಲಿ ನಮ್ಮ ಸಂಸ್ಥೆಯು ಏಪ್ರಿಲ್ 2019 ರಲ್ಲಿ ಸರ್ಕಾರದ ಸುತ್ತೋಲೆ ಪ್ರಕಾರ ಮುಚ್ಚಲಾಗಿರುತ್ತದೆ ಎಂದು ಹೇಳಿರುತ್ತೇನೆ ಎಂದರೆ ಸರಿ .

ಕೋವಿಡ್ ಲಾಕ್ ಡೌನ್ ಗೆ ಸಂಬಂಧಿಸಿದಂತೆ ಸರ್ಕಾರದ ಸುತ್ತೋಲೆಯು ಮಾರ್ಚ 2020 ರಂದು ಹೊರಡಿಸಲಾಗಿರುತ್ತದೆ ಎಂದರೆ ಸರಿ . ಸಾಕ್ಷಿಯು ಮುಂದುವರೆದು ನಮ್ಮ ಸಂಸ್ಥೆಯು ಲಾಸ್ ನಲ್ಲಿ ನಡೆಯುತ್ತಿದ್ದರಿಂದ ಅದನ್ನು ಕೋವಿಡ್ ಪ್ರಾರಂಭವಾಗುವ ಮೊದಲೇ ಮುಚ್ಚಲಾಗಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಪ್ರಮಾಣ ಪತ್ರದ 2 ನೇ ಪ್ಯಾರಾದಲ್ಲಿ ಫೆಬ್ರವರಿ 2019 ರಿಂದ ಡಿಸೆಂಬರ್ 2019 ರವರೆಗೆ ನಮ್ಮ ಸಂಸ್ಥೆಯು ನಡೆಯುತ್ತಿದ್ದು ಆ ಅವಧಿಗೆ ನಾನು ವಂತಿಗೆಯನ್ನು ಕಟ್ಟಲು ಭಾದ್ಯಸ್ಥನಾಗಿರುತ್ತೇನೆ ಎಂದು ನಮೂದಿಸಲಾಗಿರುತ್ತದೆ ಎಂದರೆ ಸರಿ . ಸಾಕ್ಷಿಯು ಮುಂದುವರೆದು ಏಪ್ರಿಲ್ 2019 ರವರೆಗೆ ನಮ್ಮ ಸಂಸ್ಥೆ ಯು ಮುಚ್ಚಿದ್ದರೂ ಸಹ ನಾವು ಅದನ್ನು ಮುಚ್ಚಲು ನಡೆಸಬೇಕಾದ ಕಾನೂನು ಪ್ರಕ್ರಿಯೆಯನ್ನು ನಡೆಸದೇ ಇದ್ದುದರಿಂದ ಪ್ರಮಾಣ ಪತ್ರದಲ್ಲಿ ಡಿಸೆಂಬರ್ 2019 ರವರೆಗೆ ವಂತಿಗೆಯನ್ನು ಕಟ್ಟಲು ಒಪ್ಪಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಈ ನ್ಯಾಯಾಧೀಕರಣದ ಮುಂದೆ ನಾನು ವೇಜ್ ರಿಜಿಸ್ಟರ್ ,ಅಟೆಂಡೆನ್ಸ್ ರಿಜಿಸ್ಟರ್ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ . 2019 - 2020 ರ ಪ್ರಾಫಿಟ್ ಅಂಡ್ ಲಾಸ್ ಅಕೌಂಟ್ ಅನ್ನು ಕುಡ ನಾನು ಈ ನ್ಯಾಯಾಧೀಕರಣದ ಮುಂದೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ . ಜಿ ಎಸ್ ಟಿ ಕ್ಯಾನ್ಸಲೇಷನ್ ಸರ್ಟಿಫಿಕೇಟ್ ನ್ನು ಕೂಡ ನಾನು ಈ ನ್ಯಾಯಾಧೀಕರಣದ ಮುಂದೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ನಮ್ಮ ಹೋಟೆಲ್ ಮುಚ್ಚಿದ್ದರ ಬಗ್ಗೆ ಕಾರ್ಪೋರೇಷನ್ ರವರು ನೀಡಿದ ಸರ್ಟಿಫಿಕೇಟ್ ನ್ನು ಕೂಡ ಈ ನ್ಯಾಯಾಧೀಕರಣದ ಮುಂದೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ನಮ್ಮ ಹೋಟೆಲ್ ಈಗಲೂ ಕೂಡ ನಡೆಯುತ್ತಿದ್ದರೂ ವಂತಿಗೆ ನೀಡುವುದನ್ನು ತಪ್ಪಿಸುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ . ಕೋವಿಡ್ ಲಾಕ್ ಡೌನ್ ಇದ್ದ ಸಮಯದಲ್ಲಿ ಸರ್ಕಾರದ ಸುತ್ತೋಲೆಯ ಪ್ರಕಾರ ಫುಡ್ ಡೆಲಿವರಿ ಮಾಡಬಹುದಾಗಿತ್ತು ಎಂದರೆ ಸರಿ . ಸಾಕ್ಷಿಯು ಮುಂದುವರೆದು ನಾವು ಮಾಡುತ್ತಿರಲಿಲ್ಲ ಎಂದು ನುಡಿಯುತ್ತಾರೆ. ಎದುರುದಾರರ ಸೆಕ್ಸನ್ 45-ಎ ಆದೇಶದ ಮೇರೆಗೆ ನಾನು ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿ .

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ಸಂಧ್ಯಾ ರಾವ್ ಪಿ.),
ಅಧ್ಯಕ್ಷಾಧಿಕಾರಿಗಳು/ ಜಡ್ಜ್
ಇ.ಎಸ್.ಐ.ನ್ಯಾಯಾಲಯ,
ಮೈಸೂರು.